RNU AIR DHARWAD

**NOVEMBER 22,2024**
**ALL INDIA RADIO- DHARWAD**
**PRADESH SAMACHARA (KANNADA) 12PM**

<><><>

ಆಕಾಶವಾಣಿ

ಪ್ರದೇಶ ಸಮಾಚಾರ

ಓದಿದವವರು: ವಿವೇಕಾದಿತ್ಯ ಕನಿಯಾಲ

<><><>

ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ, ಸೇವಾ ಶುಲ್ಕ ಹೆಚ್ಚಿಸಿರುವುದು, ಆಸ್ಪತ್ರೆಗಳ ಅಭಿವೃದ್ಧಿಗಾಗಿ ಎಂದು ಆರೋಗ್ಯ ಖಾತೆ ಸಚಿವ ದಿನೇಶ ಗುಂಡೂರಾವ್ ಸ್ಪಷ್ಟ ಪಡಿಸಿದ್ದಾರೆ. ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ, ಈ ವಿಷಯ ಪ್ರಕಟಿಸಿರುವ ಸಚಿವರು, ರಾಜ್ಯದಲ್ಲಿ ಹಲವು ವರ್ಷಗಳ ಬಳಿಕ, ಆಸ್ಪತ್ರೆಗಳ ಸೇವಾ ಶುಲ್ಕ ಪರಿಷ್ಕರಿಸಲಾಗಿದೆ. ಆಸ್ಪತ್ರೆಗಳಲ್ಲಿ ಸಂಗ್ರಹವಾಗುವ ಹಣ, ಆಸ್ಪತ್ರೆಗಳ 'ಆರೋಗ್ಯ ರಕ್ಷಾ ಸಮಿತಿ'ಗೆ ಸೇರಲಿದೆ. ರಾಜ್ಯದ ಜನತೆಗೆ ಹೊರೆಯಾಗದಂತೆ, ಸೇವಾ ಶುಲ್ಕವನ್ನು ಅಲ್ಪ ಪ್ರಮಾಣದಲ್ಲಿ ಹೆಚ್ಚಿಸಲಾಗಿದೆ ಎಂದಿದ್ದಾರೆ.

<><><>

ಸರ್ಕಾರಿ ಆಸ್ಪತ್ರೆಗಳು ಸಾರ್ವಜನಿಕ ಆಸ್ತಿಯಾಗಿದ್ದು, ಆರೋಗ್ಯ ಸೇವೆಗಳನ್ನು, ಸಮರ್ಪಕವಾಗಿ ಬಳಸಿಕೊಳ್ಳಬೇಕು ಎಂಬ ಉದ್ದೇಶದಿಂದ, ಗದಗ ಜಿಲ್ಲೆ ಜಿಮ್ಸ್ ಆಸ್ಪತ್ರೆ ಪರಿಸರದಲ್ಲಿ, ಗದುಗಿನ ಗಾಂಧೀವಾದಿ, ಮುತ್ತಣ್ಣ ತಿರ್ಲಾಪೂರ ಅವರ ನೇತೃತ್ವದಲ್ಲಿ ಆಸ್ಪತ್ರೆ ಉಳಿಸಿ, ಸಂರಕ್ಷಿಸುವ ಕುರಿತು ಜಾಗೃತಿ ಅಭಿಯಾನ ಜರುಗಿತು. ರಕ್ತದಾನ ಹಾಗೂ ಅಂಗಾಂಗ ದಾನದ ಮೂಲಕ ಜೀವದಾನ ಮಾಡುವಂತೆ, ಅವರು ವಿದ್ಯಾರ್ಥಿಗಳೊಂದಿಗೆ ಪಾದಯಾತ್ರೆ ನಡೆಸಿದರು.

<><><>

ಮೀನುಗಾರಿಕೆ ಸಂದರ್ಭದಲ್ಲಿ ಸಂಭವಿಸಬಹುದಾದ, ಅವಘಡಗಳಲ್ಲಿ ಮೃತಪಡುವ ಮೀನುಗಾರರ ವಾರಸುದಾರರಿಗೆ ನೀಡುವ ಪರಿಹಾರ ಧನವನ್ನು, 8 ಲಕ್ಷ ದಿಂದ 10 ಲಕ್ಷ ರೂಪಾಯಿಗೆ ಏರಿಸಲು, ನಿರ್ಧರಿಸಲಾಗಿದೆ ಎಂದು, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ತಿಳಿಸಿದ್ದಾರೆ.

ವಿಶ್ವ ಮೀನುಗಾರಿಕಾ ದಿನಾಚರಣೆ ಹಿನ್ನೆಲೆ, ಉತ್ತರಕನ್ನಡ ಜಿಲ್ಲೆ, ಮರುಡೇಶ್ವರದಲ್ಲಿ ಆರಂಭವಾದ 3 ದಿನಗಳ ಮತ್ಸ್ಯ ಮೇಳಕ್ಕೆ, ಉಪ ಮುಖ್ಯಮಂತ್ರಿ ಚಾಲನೆ ನೀಡಿ, ಮಾತನಾಡಿದರು. ಕರಾವಳಿ ಭಾಗಕ್ಕೆ

ಪ್ರತ್ಯೇಕ ಪ್ರವಾಸೋದ್ಯಮ ನೀತಿಯನ್ನು ಜಾರಿಗೆ ತಂದು, ಯುವಜನರಿಗೆ ಸ್ಥಳೀಯವಾಗಿ ಉದ್ಯೋಗ ಸೃಷ್ಟಿಸಲು, ಸರ್ಕಾರ ಚಿಂತನೆ ನಡೆಸಿದೆ ಎಂದರು.

<><><>

“ಸಾರ್ವಜನಿಕ ಹಾಗೂ ಖಾಸಗಿ ಸಹಭಾಗಿತ್ವ”ವನ್ನು ಪ್ರೋತ್ಸಾಹಿಸಲು, ದಿ ನಡ್ಜ್ ಇನ್ಸ್‌ಟಿಟ್ಯೂಟ್ ಸಹಯೋಗದಲ್ಲಿ, ರಾಜ್ಯ ಸರ್ಕಾರ, ಇಂಡಿಯನ್ ಎಡ್ಮಿನಿಸ್ಟ್ರೇಟಿವ್ ಫೆಲೋಶಿಪ್ ಜಾರಿ ಗೊಳಿಸಿದೆ ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ. ಇಂಡಿಯನ್ ಎಡ್ಮಿನಿಸ್ಟ್ರೇಟಿವ್ ಫೆಲೋಶಿಪ್, 18 ತಿಂಗಳ ಪೂರ್ಣಾವಧಿಯ ಫೆಲೋಶಿಪ್ ಆಗಿದೆ. ಖಾಸಗಿ ವಲಯದ ವೃತ್ತಿಪರರಿಗೆ, ದೂರದೃಷ್ಟಿಯ ನಾಗರಿಕ ಸೇವಕರೊಂದಿಗೆ ಸಹಕರಿಸಲು, ಅನನ್ಯ ಅವಕಾಶವನ್ನು ಒದಗಿಸುತ್ತದೆ ಎಂದು, ಅವರು ಪ್ರಕಟಿಸಿದ್ದಾರೆ. ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ ಅವರು, ಬರುವ ಡಿಸೆಂಬರ್ ತಿಂಗಳಲ್ಲಿ, ಮೂರನೇ ತಂಡದ ಫೆಲೋಷಿಪ್‌ಗಾಗಿ ಅರ್ಜಿ ಆಹ್ವಾನಿಸಲಾಗುವುದು ಎಂದು, ಹೇಳಿದ್ದಾರೆ.

<><><>

ಹೊಸ ದಿಲ್ಲಿಯ ಪ್ರಗತಿ ಮೈದಾನದಲ್ಲಿ ‘ಇಂಡಿಯನ್ ಇಂಟರ್ ನ್ಯಾಷನಲ್ ಟ್ರೇಡ್ ಫೇರ್ **(I.I.T.F)** ನ, ಕರ್ನಾಟಕ ಪೆವಿಲಿಯನ್ ನ್ನಲ್ಲಿ, ಬಂಜಾರಾ ಕಸೂತಿ ಕಲೆಯ ಪ್ರದರ್ಶನ ಜರುಗುತ್ತಿದೆ. ಬರುವ 27ನೇ ತಾರೀಖೀನ ವರೆಗೆ, ರಾಜ್ಯ ಬೃಹತ್ ಕೈಗಾರಿಕೆಗಳ ಖಾತೆ ಸಚಿವ ಎಂ.ಬಿ. ಪಾಟೀಲ ಅವರ, ಶ್ರೀಮತಿ, ಸಾಮಾಜಿಕೋದ್ಯಮಿ, ಆಶಾ ಪಾಟೀಲ ಅವರು, ವಿಜಯಪುರದ ‘ಬಂಜಾರಾ ಕಸೂತಿ ಆರ್ಗನೈಸೇಷನ್’ ನೇತೃತ್ವದಲ್ಲಿ, ವಿಜಯಪುರ ಜಿಲ್ಲೆಯ ಬಂಜಾರ ಸಮಾಜದ, ಸಾಂಪ್ರದಾಯಿಕ ಕಸೂತಿ ಮತ್ತು ಕರಕುಶಲ ವಸ್ತುಗಳ ಪ್ರದರ್ಶನ ಮತ್ತು ಮಾರಾಟಕ್ಕೆ ವ್ಯವಸ್ಥೆ ಕಲ್ಪಿಸಿದ್ದಾರೆ.

<><><>

ರಾಷ್ಟ್ರೀಯ ಸಾರ್ವಜನಿಕ ಪ್ರಸಾರ ಸಂಸ್ಥೆ, ಪ್ರಸಾರ ಭಾರತಿ ತನ್ನದೇ ಆದ, ಓವರ್ ದಿ ಟಾಪ್ ಒ.ಟಿ.ಟಿ. ವೇದಿಕೆ, ‘ವೇವ್ಸ್’ಅನ್ನು ಆರಂಭಿಸಿದೆ. ಗೋವಾದಲ್ಲಿ ಆಯೋಜಿತ, 55ನೇ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಈ ವೇದಿಕೆಯನ್ನು ಅನಾವರಣ ಗೊಳಿಸಲಾಯಿತು. ಪ್ರಸಾರ ಭಾರತಿ ಅಧ್ಯಕ್ಷ ನವನೀತಕುಮಾರ ಸೆಹಗಲ್ ಮಾತನಾಡಿ, ಪ್ರಧಾನಮಂತ್ರಿಯವರ ‘ಮನ್ ಕಿ ಬಾತ್’ ಸೇರಿದಂತೆ, ಆಕಾಶವಾಣಿ ಮತ್ತು ದೂರದರ್ಶನದ ವಿವಿಧ ಕಾರ್ಯಕ್ರಮಗಳನ್ನು, ನೇರ ಪ್ರಸಾರ ಮಾಡಲಾಗುವುದು, ಎಂದರು.

<><><>

ರಾಜ್ಯದ ಗ್ರಾಮೀಣ ಶಾಲೆಗಳಲ್ಲಿ ಮೂಲ ಸೌಕರ್ಯಗಳನ್ನು ಒದಗಿಸಲಾಗುತ್ತಿದ್ದು, ಮಕ್ಕಳು, ತಪ್ಪದೇ ಶಾಲೆಗೆ ಬರುವಂತೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಖಾತೆ ಸಚಿವರಾದ ಲಕ್ಷ್ಮೀ ಹೆಬ್ಬಾಳಕರ್ ಕೋರಿದ್ದಾರೆ. ಬೆಳಗಾವಿ ಜಿಲ್ಲೆ, ಬಸರೀಕಟ್ಟಿ ಗ್ರಾಮದ, ಸರ್ಕಾರಿ ಕನ್ನಡ ಹಿರಿಯ ಪ್ರಾಥಮಿಕ ಶಾಲೆಯ, ಕೊಠಡಿಗಳ ನಿರ್ಮಾಣ ಕಾಮಗಾರಿಗೆ, ಭೂಮಿ ಪೂಜೆ ನೆರವೇರಿಸಿ, ಅವರು ಮಾತನಾಡಿದರು.

<><><>

ಬೆಂಗಳೂರು ಕೆಂಗೇರಿಯ ಬಿ.ಜಿ.ಎಸ್. ಸಿಟಿಯಲ್ಲಿ ಆಯೋಜಿಸಲಾಗಿದ್ದ, 16 ನೇ ಸಂಸ್ಥಾಪನ ದಿನದ ಕಾರ್ಯಕ್ರಮವನ್ನು, ಕೇಂದ್ರ ಬೃಹತ್ ಕೈಗಾರಿಕೆ ಹಾಗೂ ಉಕ್ಕು ಖಾತೆ ಸಚಿವ ಎಚ್.ಡಿ ಕುಮಾರಸ್ವಾಮಿ, ಡಾಕ್ಟರ್ ಬಾಲಗಂಗಾಧರ ಸ್ವಾಮೀಜಿ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವ ಮೂಲಕ ಉದ್ಘಾಟಿಸಿದರು. ಆದಿಚುಂಚನಗಿರಿ ಪೀಠಾಧಿಪತಿ ಡಾಕ್ಟರ್ ನಿರ್ಮಲಾನಂದನಾಥ ಸ್ವಾಮೀಜಿ, ಅಯೋಧ್ಯೆಯ ಬಾಲರಾಮನ ಶಿಲ್ಪಿ ಅರುಣ್ ಯೋಗಿರಾಜ್ ಪಾಲ್ಗೊಂಡಿದ್ದರು.

<><><>

ಬಾಗಲಕೋಟೆ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ನೂತನ ಅಧ್ಯಕ್ಷರಾಗಿ ಹನಮಂತಗೌಡ ಶ್ರವಣಗೌಡ ಪಾಟೀಲ ಆಯ್ಕೆಯಾಗಿದ್ದಾರೆ.

<><><>

ರಾಜ್ಯ ಒಲಿಂಪಿಕ್ ಅಸೋಸಿಯೇಷನ್, ಬೆಂಗಳೂರಿನ ಕಂಠೀರವ ಒಳಾಂಗಣ ಕ್ರೀಡಾಂಗಣದಲ್ಲಿ ಆಯೋಜಿಸಿದ್ದ, ರಾಜ್ಯ ಮಟ್ಟದ 3ನೇ ಮಿನಿ ಒಲಿಂಪಿಕ್ ಕ್ರೀಡಾಕೂಟದಲ್ಲಿ, ವಿಜಯನಗರದ ವುಶು ಸಂಸ್ಥೆಯ 8 ಪಟುಗಳು ಭಾಗವಹಿಸಿ, 6 ಪದಕಗಳನ್ನು ಗಳಿಸಿದ್ದಾರೆ. ಕೆ.ರಾಜ, ಪ್ರಥಮ ಸ್ಥಾನ ಪಡೆದಿದ್ದಾರೆ. ಅಖಿಲ್, ತರಬೇತುದಾರರಾಗಿದ್ದಾರೆ.

<><><>

ಮಿನಿ ಒಲಿಂಪಿಕ್, ವಾಲಿಬಾಲ್ ಪಂದ್ಯಾವಳಿಯಲ್ಲಿ, ಕೊಪ್ಪಳ ಕ್ರೀಡಾ ವಸತಿ ನಿಲಯದ ಬಾಲಕಿಯರು ಪ್ರಥಮ ಸ್ಥಾನ ಮತ್ತು ಬಾಲಕರು ತೃತೀಯ ಸ್ಥಾನ ಪಡೆದಿದ್ದಾರೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ 1 ಗಂಟೆ 10 ನಿಮಿಷಕ್ಕೆ..

<><><>